ಆಂಧ್ರಪ್ರದೇಶದ ಬಾಪಟ್ಲದ ಕನುಪರ್ತಿ ವರಲಕ್ಷ್ಮಮ್ಮ (1896– 1978) ಸ್ವಾತಂತ್ರ್ಯ ಹೋರಾಟದಲ್ಲಿ, ಖಾದಿ ಆಂದೋಲನದಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡಿದ್ದ ಬರಹಗಾರ್ತಿ. ಮಹಿಳೆಯರ ಸಬಲೀಕರಣ ಪ್ರಯತ್ನದಲ್ಲಿ ಅವರಿಗೆ ಸಾಹಿತ್ಯವೂ ಒಂದು ಮಾಧ್ಯವಾಗಿತ್ತು. 1920ರಲ್ಲಿ 'ಆಂಧ್ರ ಪತ್ರಿಕೆ' ಎಂಬ ಸಾಪ್ತಾಹಿಕ ಪತ್ರಿಕೆಯಲ್ಲಿ ಅಂಕಣಕಾರ್ತಿಯಾಗಿ, ಸ್ತ್ರೀ ಸುಧಾರಣೆಗೆ ಸಂಬಂಧಿಸಿದ ಲೇಖನಗಳನ್ನು ಬರೆದಿದ್ದರು. 'ವಸುಮತಿ', 'ವಿಶ್ವಾಮಿತ್ರ' ಅವರ ಕಾದಂಬರಿಗಳು. ಮಾತು–ಬರವಣಿಗೆಯ ಜೊತೆಗೆ, ಮಹಿಳೆಯರನ್ನು ಸಂಘಟಿಸಿ ಅವರಿಗೆ ಸಾಮಾಜಿಕ ಸ್ಥಾನಮಾನ ದೊರೆಯುವಂತೆ ಮಾಡಲು ಹೋರಾಟಗಳನ್ನು ರೂಪಿಸಿದ್ದರು.

'ವಿದೇಶಿ ವಸ್ತ್ರಗಳ ದುಕಾನುಗಳ ಹತ್ತಿರ ಗುಂಪು ಗೂಡಿಸಿ ವಿದೇಶಿ ವಸ್ತ್ರಗಳನ್ನು ಕೊಳ್ಳಬಾರದೆಂದು ಜನರನ್ನು ಕಾಡುತಿದ್ದೆಯಂತಲ್ಲ?'

'ಕಾಡುತ್ತಿರಲಿಲ್ಲ. ಬೇಡುತ್ತಿದ್ದೆ.'

'ಅಂದರೆ ನೀನು ಅಪರಾಧಿಯೇ.'

'ನಿಮ್ಮ ದೃಷ್ಟಿಯಲ್ಲಿ.'

'ಡಿಫೆನ್ಸು ಇಟ್ಟುಕೊಳ್ಳುವೆಯಾ?' 'ಊಹೂಂ.'

'ಅಪಾಲಜಿ.'

ಗೋಪಾಲರಾಯನಲ್ಲಿನ ಶೌರ್ಯರಸವನ್ನು ಹೊರಚಿಮ್ಮುವಂತೆ ಆಗಿಬಿಟ್ಟಿತು ದೃಷ್ಟಿ. ಮೇಘ ಗಂಭೀರ ಧ್ವನಿಯಲ್ಲಿ ಹೇಳಿದ 'ಸತ್ಯಾಗ್ರಹವೀರರ ನಿಘಂಟುವಿನಿಂದ ಡಿಫೆನ್ಸು, ಅಪಾಲಜಿ ಎಂಬ ಪದಗಳನ್ನು ಅಳಿಸಿ ಹಾಕಲಾಗಿದೆ.'

ಮ್ಯಾಜಿಸ್ಟ್ರೇಟು ಚಕಿತನಾದ. ಮಾತು ತಡವರಿಸಿತು. 'ದೃಷ್ಟ್ವಾ ಹಿತ್ವಾಂ ಪ್ರವ್ಯಥಿತಾಂ ತರಾತ್ಮಾಧೃತಿಂ ನವಿಂದಾ ಶಮಂಚವಿ ವಿಷ್ಣಾ' ಎಂದು ಅರ್ಜುನನು ಕೃಷ್ಣನ ವಿಶ್ವರೂಪವನ್ನು ನೋಡಿ ಭಯಾರ್ತನಾಗಿ ವಿಲಗುಟ್ಟಿದಂದದಲಿ ಕೊಂಚ ಹೊತ್ತು ಒಳಗೊಳಗೇ ಅವನ ಅಂತರಾತ್ಮ ಒದ್ದಾಡಿತು. ಆದರೂ ಕರ್ತವ್ಯ ಬಿಡದು. ಬಿಂಕದಿಂದ, ಭಯದಿಂದ ಗದ್ಗದನಾಗಿ ಆರು ತಿಂಗಳು ಕಠಿಣ ಶಿಕ್ಷೆ. ಸಿ ಕ್ಲಾಸು ಅಂದ ಮ್ಯಾಜಿಸ್ಟ್ರೇಟು.

'ವಂದನೆಗಳು' ಅಂದ ಗೋಪಾಲರಾಯ.

## 6

ರುಕ್ಮಿಣಿಯ ಮನೆ ಅರಣ್ಯವಾಗಿ ಹೋಯಿತು. ಎಂಟು ತಿಂಗಳ ಹಿಂದೆ ತವರಿಗೆ ಹೋಗಿದ್ದು, ಆ ದಿನವೇ ಬಂದಿದ್ದಳು ರುಕ್ಮಿಣಿ. ಮಗನನ್ನು ತೋರಿಸಲಿಲ್ಲ. ನಗು ನಗಲಿಲ್ಲ. ಹಾಸ್ಯ ಮಾಡಲಿಲ್ಲ. ತನ್ನ ಹೃದಯವನ್ನವನಿಗೆ ತಿಳಿಸಲಿಲ್ಲ. ಅವನ ಹೃದಯವನ್ನು ತಾನು ಅರಿಯಲಿಲ್ಲ. ಹಾ! ಎಂಥ ಸ್ಥಿತಿ, ಎಂಥ ವಿಘಾತ? ಗಂಡನ ಶಿಕ್ಷೆಯ ವರ್ತಮಾನವನ್ನು ಕೇಳಿ ಸಿಡಿಲು ಬಡಿದಂತೆ ನೆಲಕ್ಕುರುಳಿದಳು ರುಕ್ಮಿಣಿ.

'ಬಿಸಿಲು ಸಹಿಸಲಾರ, ಹಸಿವೆ ತಾಳಲಾರ, ಕಷ್ಟದ ಕೆಲಸ ಮಾಡಲಾರ. ತುಪ್ಪದಲ್ಲಿ ಗರಿಗರಿಯಾಗಿ ಹುರಿದ ಪಲ್ಯದ ಹೊರತು ಕೆಲಸಕ್ಕೆ ಬಾರದು. ಮೆತ್ತನೆ ಹಾಸಿಗೆ ಮೇಲಲ್ಲದೆ ಮೈ ಒರಗಿಸಲಾರ. ಬಜಾರಿನಿಂದ ಒಂದು ವಸ್ತು ತಾರೋ ಅಯ್ಯಾ ಅಂದರೆ ಅಭಿಮಾನ, ನಾಚಿಕೆ. ಇಂಥವನೇ ನನ್ನಪ್ಪ! ಈ ಆರು ತಿಂಗಳು ಆ ಸೆರೆಯಲ್ಲಿ ಹೇಗಿದ್ದು ಬರುವೆಯೊ? ನಮ್ಮ ಕಣ್ಣುಗಳನ್ನು ಯಾವಾಗ ತಂಪು ಮಾಡುವೆಯೊ?' ಎಂದು ತಾಯ್ತಂದೆಯ ಅಳಲು. ಅನ್ನವಿಲ್ಲ, ನೀರಿಲ್ಲ. ಆಕಾಶ ಕಳಚಿ ಮೇಲೆ ಬಿದ್ದಂತಾಗಿತ್ತು ಆ ಸಂಸಾರದ

